# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶಿಶುಕೇಂದ್ರೀತ ಯೋಜನೆಯಡಿ ಸರ್ಕಾರೇತರ ಸಂಸ್ಥೆಗಳು ನಡೆಸುತ್ತಿರುವ ಶ್ರವಣದೋಶವುಳ್ಳ ಮತ್ತು ಅಂಧರ ಹಾಗೂ ಬುದ್ಧಿಮಾಂದ್ಯ ವಿಶೇಷ ಶಾಲೆಗಳ ಪ್ರತಿ ಮಗುವಿಗೆ ನೀಡುವ ಮಾಸಿಕ ಅನುದಾನವನ್ನು ರೂ.1200 ಗಳಷ್ಟು ಹೆಚ್ಚಿಸುವ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಮಮಇ/109/ಪಿಹೆಚ್‌ಪಿ2010 ದಿ:14.12.201 ಹಾಗೂ ಸೇರ್ಪಡೆ ಆದೇಶದ ದಿ:29.12.2010
2. ಸರ್ಕಾರದ ಆದೇಶ ಸಂಖ್ಯೆ ಸಂಖ್ಯೆ:ಮಮಇ/107/ ಪಿಹೆಚ್‌ಪಿ/2014,ದಿ:25.06.2014.
3. ಸರ್ಕಾರದ ಆದೇಶದ ಸಂಖ್ಯೆ ಮಮಇ/122/ ಪಿಹೆಚ್‌ಪಿ/2016,ದಿ:05.05.2016
4. ನಿರ್ದೇಶಕರು ವಿ.ಹಿ.ನಾ.ಸ. ಇಲಾಖೆ ಇವರ ಏಕ ಕಡತ ಇಸಿ/ಸಿ.2/ಶಿ.ಕೇ.ಯೋ.ಪರಿಷ್ಕರಣೆ/06/2017-18

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಾಂಕ (1)ರ ಸರ್ಕಾರದ ಆದೇಶ ಸಂಖ್ಯೆ: ಮಮಇ/109/ಪಿಹೆಚ್‌ಪಿ/2010 ದಿ:14.12.2010 ಹಾಗೂ ಸೇರ್ಪಡೆ ಆದೇಶದ ದಿ:29.12.2010 ರಂತೆ ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆಯ ರೂಪುರೇಷೆ ಹಾಗೂ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (2)ರ ಸರ್ಕಾರದ ಆದೇಶ ಸಂಖ್ಯೆ ಮಮಇ/107/ಪಿಹೆಚ್‌ಪಿ/2014 ದಿ:25.06.2014 ರಂತೆ ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆಯಡಿ ವಿಶೇಷ ಶಾಲೆಗಳಿಗೆ ನೀಡುತ್ತಿರುವ ಅನುದಾನವನ್ನು ಅಂಗವಿಕಲತೆಗನುಸಾರ ವಸತಿ ಶಾಲೆಗಳ ಪ್ರತಿ ಮಗುವಿಗೆ ನೀಡಲಾಗುತ್ತಿದ್ದ ಮಾಸಿಕ ರೂ.2500 ಮೊತ್ತವನ್ನು ರೂ.5000ಗಳಿಗೆ ವಸತಿ ರಹಿತ ಶಾಲೆಯ ಮಕ್ಕಳಿಗೆ ಮಾಸಿಕ ತಲಾ ರೂ.2000ಗಳ ಮೊತ್ತವನ್ನು ರೂ.4000ಗಳಿಗೆ ದ್ವಿಗುಣಗೊಳಿಸಿ ಮಂಜೂರಾತಿ ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (3) ರ ಸರ್ಕಾರದ ಆದೇಶ ಸಂಖ್ಯೆ ಮಮಇ/122/ಪಿಹೆಚ್‌ಪಿ/2016 ರಂತೆ ವಸತಿ ಶಾಲೆಯ ಬುದ್ಧಿಮಾಂದ್ಯ ಪ್ರತಿ ಮಗುವಿಗೆ ಮಾಸಿಕ ರೂ.5600/- ಹಾಗೂ ವಸತಿರಹಿತ ಶಾಲೆಯ ಪ್ರತಿ ಮಗುವಿಗೆ ಮಾಸಿಕ ರೂ.4800/-ಗಳಿಗೆ ಪರಿಷ್ಕರಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ(4) ಏಕ ಕಡತದ ಪ್ರಕಾರ ಪ್ರಸ್ತುತ ರಾಜ್ಯದಲ್ಲಿ 137 ವಿಶೇಷ ಶಾಲೆಗಳು ಈ ಯೋಜನೆಯಡಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುತ್ತಿದ್ದು, 9447 ಶ್ರವಣದೋಷ, ದೃಷ್ಟಿದೋಷ ಹಾಗೂ ಬುದ್ಧಿಮಾಂದ್ಯ ವಿಕಲಚೇತನ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಮಕ್ಕಳ ನಿರ್ವಹಣಾ ಪಥ್ಯಾಹಾರ ವೆಚ್ಚಗಳು ಏರಿಕೆಯಾಗುತ್ತಿದ್ದು, ವಿಶೇಷ ಶಾಲೆಗಳನ್ನು ನಡೆಸಲು ಆರ್ಥಿಕವಾಗಿ ತುಂಬ ಹೊರೆಯಾಗಿರುವುದರಿಂದ ಸ್ವಯಂ ಸೇವಾ ಸಂಸ್ಥೆಗಳು ಮಕ್ಕಳಿಗೆ ನೀಡುತ್ತಿದ್ದ ಅನುದಾನದ ಮೊತ್ತವನ್ನು ಹೆಚ್ಚಿಸಲು ಬೇಡಿಕೆ ಸಲ್ಲಿಸಿದ್ದು, ಮಾನ್ಯ ಮುಖ್ಯಮಂತ್ರಿಗಳು ದಿ:15.03.2017ರಂದು ಮಂಡಿಸಿದ 2017-18ನೇ ಸಾಲಿನ ಆಯವ್ಯಯ ಭಾಷಣದಲ್ಲಿ "ಶಿಶುಕೇಂದ್ರೀಕೃತ ಯೋಜನೆಯಡಿ ಸರ್ಕಾರೇತರ ಸಂಸ್ಥೆಗಳು ನಡೆಸುತ್ತಿರುವ ಶ್ರವಣದೋಷವುಳ್ಳ, ಅಂಧರ ಹಾಗೂ ಬುದ್ಧಿಮಾಂದ್ಯ ವಿಶೇಷ ಶಾಲೆಗಳ ಪ್ರತಿ ಮಗುವಿಗೆ ನೀಡುವ ಮಾಸಿಕ ಅನುದಾನವನ್ನು ರೂ.1200.00 ಗಳಷ್ಟು ಹೆಚ್ಚಿಸಲಾಗುವುದೆಂದು" ಘೋಷಣೆ ಮಾಡಿರುವ ಹಿನ್ನಲೆಯಲ್ಲಿ ಅಂಧ ಮತ್ತು ವಾಕ್ ಶ್ರವಣದೋಷವುಳ್ಳ ವಸತಿ ಶಾಲೆಯ ಪ್ರತಿ ಮಗುವಿಗೆ ಮಾಸಿಕ ಅನುದಾನ ಮೊತ್ತವನ್ನು ರೂ.5000.00 ರಿಂದ 6200.00 ಕ್ಕೆ ವಸತಿ ರಹಿತ ಶಾಲೆಯ ಪ್ರತಿ ಮಗುವಿಗೆ ಮಾಸಿಕ ಅನುದಾನದ ಮೊತ್ತವನ್ನು

..2

ರೂ.4000.00 ರಿಂದ ರೂ.5200.00 ಗಳಿಗೆ ಹಾಗೂ ವಸತಿ ಶಾಲೆಯ ಬುದ್ಧಿಮಾಂದ್ಯ ಪ್ರತಿ ಮಗುವಿಗೆ ಮಾಸಿಕ ಅನುದಾನದ ಮೊತ್ತವನ್ನು ಮಾಸಿಕ ರೂ.5600.00 ರಿಂದ ರೂ.6800.00 ಕ್ಕೆ ಹಾಗೂ ವಸತಿ ರಹಿತ ಶಾಲೆಯ ಪ್ರತಿ ಮಗುವಿಗೆ ಅನುದಾನದ ಮೊತ್ತವನ್ನು ಮಾಸಿಕ ರೂ.4800.00 ರಿಂದ ರೂ.6000.00 ಗಳಿಗೆ ಹೆಚ್ಚಿಸಿ ಆದೇಶಿಸಿದೆ. ಸರ್ಕಾರವು ಈಗಾಗಲೇ ಹೊರಡಿಸಿರುವ ಮಾರ್ಗಸೂಚಿಗಳನ್ವಯ ಲೆಕ್ಕ ಶೀರ್ಷಿಕೆ 2235-02-104-2-06 ಯೋಜನೆ, ಉಪಲೆಕ್ಕಶೀರ್ಷಿಕೆ 103 ಸಹಾಯಾನುದಾನ, 422-ಪರಿಶಿಷ್ಟ ಜಾತಿ ಉಪಯೋಜನೆ ಮತ್ತು 423-ಗಿರಿಜನ ಉಪಯೋಜನೆಯಡಿ 2017-18ನೇ ಸಾಲಿಗೆ ಒದಗಿಸಿರುವ ಆಯವ್ಯಯದಲ್ಲಿ ಭರಿಸಲು ಯೋಜನೆಯ ಪರಿಷ್ಕರಣೆ, ತಡೆಪಟ್ಟಿ, ಅಯವ್ಯಯದ ವಿವರಗಳೊಂದಿಗೆ ಸೂಕ್ತ ಆದೇಶ ಹೊರಡಿಸಲು ನಿರ್ದೇಶಕರು ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:ಮಮಇ 90 ಪಿಹೆಚ್‌ಪಿ 2017, ಬೆಂಗಳೂರು, ದಿ:06.05.2017**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಅಂಧ ಮತ್ತು ವಾಕ್, ಶ್ರವಣದೋಷವುಳ್ಳ ವಸತಿ ಶಾಲೆಯ ಪ್ರತಿ ಮಗುವಿಗೆ ಮಾಸಿಕ ಅನುದಾನ ಮೊತ್ತವನ್ನು ರೂ.5000.00 ರಿಂದ 6200.00 ಕ್ಕೆ ವಸತಿ ರಹಿತ ಶಾಲೆಯ ಪ್ರತಿ ಮಗುವಿಗೆ ಮಾಸಿಕ ಅನುದಾನದ ಮೊತ್ತವನ್ನು ರೂ.4000.00 ರಿಂದ ರೂ.5200.00 ಗಳಿಗೆ ಹಾಗೂ ವಸತಿ ಶಾಲೆಯ ಬುದ್ಧಿಮಾಂದ್ಯ ಪ್ರತಿ ಮಗುವಿಗೆ ಮಾಸಿಕ ಅನುದಾನದ ಮೊತ್ತವನ್ನು ಮಾಸಿಕ ರೂ.5600.00 ರಿಂದ ರೂ.6800.00 ಕ್ಕೆ ಹಾಗೂ ವಸತಿ ರಹಿತ ಶಾಲೆಯ ಪ್ರತಿ ಮಗುವಿಗೆ ಅನುದಾನದ ಮೊತ್ತವನ್ನು ಮಾಸಿಕ ರೂ.4800.00 ರಿಂದ ರೂ.6000.00 ಗಳಿಗೆ ಹೆಚ್ಚಿಸಿ ಆದೇಶಿಸಿದೆ. ಸರ್ಕಾರವು ಈಗಾಗಲೇ ಹೊರಡಿಸಿರುವ ಆದೇಶ ಸಂಖ್ಯೆ ಮಮಇ/122/ಪಿಹೆಚ್‌ಪಿ/2016 ದಿ:05.05.2017ರ ಆದೇಶಕ್ಕೆ ಲಗತ್ತಿಸಿರುವ ದಿ:06.12.2016ರ ಹಾಗೂ ಮಮಇ 107 ಪಿಹೆಚ್‌ಪಿ 2014 ದಿ:25.06.2014ರ ಯೋಜನಾ ಮಾರ್ಗಸೂಚಿಗಳನ್ವಯ ನಿಯಮಗಳನುಸಾರ ಮತ್ತು ಪಾರದರ್ಶಕತೆಯನ್ವಯ 2017-18ನೇ ಸಾಲಿನ ಲೆಕ್ಕ ಶೀರ್ಷಿಕೆ 2235-02-104-2-06 ಯೋಜನೆ, ಉಪಲೆಕ್ಕಶೀರ್ಷಿಕೆ 103 ಸಹಾಯಾನುದಾನ, 422-ಪರಿಶಿಷ್ಟ ಜಾತಿ ಉಪಯೋಜನೆ ಮತ್ತು 423-ಗಿರಿಜನ ಉಪಯೋಜನೆಯಡಿ ಒದಗಿಸಿರುವ ರೂ.3983.00 ಲಕ್ಷಗಳ ಆಯವ್ಯಯದಲ್ಲಿ ಭರಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಕ್ರಮವಾಗಿ ಆರ್ಥಿಕ ಇಲಾಖೆ, ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 224 ವೆಚ್ಚ-10 2017, ದಿನಾಂಕ:22.04.2017 ಮತ್ತು ಪಿಡಿ 69 ಐಎಂಎಂ 2017 ದಿನಾಂಕ:28.04.2016ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

6/5/2017
(ಜಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

ಪ್ರತಿಗಳು:

1. ಪ್ರಧಾನ ಮಹಾಲೇಖಪಾಲರು, (ಜಿ &ಎಸ್‌ಎಸ್‌ಎ) ಕರ್ನಾಟಕ, ಹೊಸಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು, (ಇ & ಆರ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560001.

3. ಪ್ರಧಾನ ಮಹಾಲೇಖಪಾಲರು, (ಎ & ಇ ) ಕರ್ನಾಟಕ, ಹೊಸ ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560001.
4. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
6. ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-10), ವಿಧಾನ ಸೌಧ, ಬೆಂಗಳೂರು.
8. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
10. ಸರ್ಕಾರದ ಉಪಕಾರ್ಯದರ್ಶಿರವರು, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು
11. ಸರ್ಕಾರದ ಅಧೀನ ಕಾರ್ಯದರ್ಶಿ-1, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
12. ಶಾಖಾಧಿಕಾರಿ, ಸ್ವೀಮರ ಶಾಖೆ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
13. ಶಾಖಾ ರಕ್ಷಾ ಕಡತ/ಒ.ಡಿ.ಜಿ.ಸಿ/ಸೂಚನಾ ಫಲಕ/ಹೆಚ್ಚುವರಿ ಪ್ರತಿಗಳು.